**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರ ನಿಯಮ 330 ಅಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ:71 ಕ್ಕೆ ಮಾನ್ಯ ಇಂಧನ ಸಚಿವರ ಉತ್ತರ:**

**ವಿಷಯ :** ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಹಾಗೂ ಇತರೆ ವಿದ್ಯುತ್ ಕಂಪನಿಗಳಲ್ಲಿ ಸಕ್ರಮೀಕರಣಗೊಂಡಿರುವ ರೈತರ ನೀರಾವರಿ ಪಂಪ್ ಸೆಟ್‌ಗಳಿಗೆ ವಿದ್ಯುತ್ ಮೂಲ ಸೌಕರ್ಯಗಳಾದ ಕಂಬ, ಕಂಡಕ್ಟರ್, ಪರಿವರ್ತಕ ಇತರೆಗಳನ್ನು ಅಳವಡಿಸಲು ಅಂದಾಜು ಪಟ್ಟಿ ತಯಾರಿಸಿ, ಕೆ.ಇ.ಆರ್.ಸಿ. ವತಿಯಿಂದ ಬಡ್ಜೆಟ್‌ಗೆ ಅನುಮೋದನೆ ಪಡೆದು, ಪೂರ್ಣ ಗುತ್ತಿಗೆ ಆಧಾರದಲ್ಲಿ ಟೆಂಡರ್ ಕರೆದು, ಕಾರ್ಯಾದೇಶ ನೀಡಲಾಗಿರುತ್ತದೆ. ಆದರೂ 2023-24ನೇ ಸಾಲಿಗೆ ಬಡ್ಜೆಟ್ ನೀಡಿರುವುದಿಲ್ಲ. ಇದರಿಂದಾಗಿ ರೈತರಿಗೆ ವಿದ್ಯುತ್ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕಾಮಗಾರಿಗಳು ವಿಳಂಬವಾಗಿರುವ ಗಂಭೀರ ಸಮಸ್ಯೆ ಕುರಿತು ಮಾನ್ಯ ಇಂಧನ ಸಚಿವರಲ್ಲಿ ಪ್ರಸ್ತಾಪಿಸಿರುವ ಬಗ್ಗೆ.

*****

ಉತ್ತರ :

ನೀರಾವರಿ ಪಂಪ್ ಸೆಟ್‌ಗಳಿಗೆ Stand alone/off Grid ಸೋಲಾರ್ ಪಂಪ್ ಸೆಟ್‌ಗಳನ್ನು ಒದಗಿಸುವ ಮೂಲಕ ನೀರಾವರಿ ಪಂಪ್ ಸೆಟ್‌ಗಳನ್ನು ಬೆಂಬಲಿಸುವುದು ಮತ್ತು IP set ಫೀಡರ್‌ಗಳನ್ನು ಸೌರೀಕರಣಗೊಳಿಸುವ ಬಗ್ಗೆ ಸರ್ಕಾರಿ ಆದೇಶ ಸಂಖ್ಯೆ: ಎನರ್ಜಿ/ವಿಎಸ್‌ಸಿ/214/2023, ಬೆಂಗಳೂರು, ದಿನಾಂಕ: 07.10.2023 ರನ್ವಯ, ವಿದ್ಯುತ್ ಸರಬರಾಜು ಕಂಪನಿಗಳು ಸಕ್ರಮಗೊಳಿಸಿದ ಕೃಷಿ ಪಂಪ್ ಸೆಟ್‌ಗಳಿಗೆ 2022-23 ಮತ್ತು 2023-24 ರಲ್ಲಿ ಟೆಂಡರ್ ಮೂಲಕ ಮೂಲ ಸೌಕರ್ಯಗಳನ್ನು ಕಲ್ಪಿಸುವ ಸಲುವಾಗಿ ಟೆಂಡರ್ ಕರೆಯಲಾದ ಅಂದಾಜು ಪಟ್ಟಿಯನ್ನು ಪುನರ್ ಪರಿಶೀಲಿಸಿ, ಪಂಪ್ ಸೆಟ್‌ಗಳು ಹಾಲಿ ಇರುವ ವಿದ್ಯುತ್ ಜಾಲದಿಂದ 500 ಮೀಟರ್‌ಯಿಂದಾಚೆ ಇದ್ದಲ್ಲಿ Stand alone/ off grid solar pump ಅಳವಡಿಸಲು ಸೂಚಿಸಿದ್ದು, 500 ಮೀಟರ್ ಒಳಗಿರುವ ಪಂಪ್ ಸೆಟ್‌ಗಳಿಗೆ ಕನಿಷ್ಠ ಅವಶ್ಯಕತೆಗೆ ತಕ್ಕಂತೆ ಅನುಷ್ಠಾನಗೊಳಿಸಲು ಕ್ರಮವಹಿಸಲು ಸೂಚಿಸಲಾಗಿರುತ್ತದೆ.

ಚಾವಿಸನಿನಿಗೆ 2023-24 ನೇ ಸಾಲಿನ ಬಂಡವಾಳ ಕಾಮಗಾರಿಗಳಿಗೆ ನಿಗದಿ ಪಡಿಸಲಾಗಿದ್ದ ಬಡ್ಜೆಟ್ ಗೆ ಮಾನ್ಯ ಕೆ.ಇ.ಆರ್.ಸಿ. ವತಿಯಿಂದ ದಿನಾಂಕ : 12.05.2023 ರಂದು ಅನುಮೋದನೆಗೊಂಡಿರುತ್ತದೆ. ಸದರಿ ಪ್ರಸ್ತಾವನೆಯಲ್ಲಿ ಸರ್ವೀಸ್ ಕನೆಕ್ಷನ್ ಕಾಮಗಾರಿಗಳಿಗೆ (ರೈತರ ನೀರಾವರಿ ಪಂಪ್ ಸೆಟ್ ಸ್ಥಾವರಗಳಿಗೆ ವಿದ್ಯುತ್ ಮೂಲಭೂತ ಸೌಕರ್ಯ ಕಲ್ಪಿಸುವ ಕಾಮಗಾರಿಗಳು ಒಳಗೊಂಡಂತೆ) ಒಟ್ಟಾರೆ ರೂ.325.00 ಕೋಟಿಗಳ ಬಡ್ಜೆಟ್ ನಿಗದಿಪಡಿಸಲಾಗಿರುತ್ತದೆ.

ಚಾವಿಸನಿನಿ ವ್ಯಾಪ್ತಿಯಲ್ಲಿ ದಿನಾಂಕ: 22.09.2023 ರ ಅಂತ್ಯಕ್ಕೆ ನೋಂದಣಿಗೊಂಡು ವಿದ್ಯುತ್ ಮೂಲಸೌಕರ್ಯ ರಚನೆಗೆ ಬಾಕಿ ಇರುವ ಕಾಮಗಾರಿಗಳ ಸಂಖ್ಯೆ 23665. ಜಿಲ್ಲಾವಾರು 500 ಮೀಟರ್ ಒಳಗಿರುವ/ ಹೊರಗಿರುವ ಅಂದಾಜು ಪಂಪ್ ಸೆಟ್‌ಗಳ ವಿವರ ಕೆಳಕಂಡಂತಿದೆ.

...2

| ಕ್ರ. ಸಂ | ಜಿಲ್ಲೆ | ವಿದ್ಯುತ್ ಜಾಲದಿಂದ 500 ಮೀಟರ್ ಒಳಗಿರುವ ನೀರಾವರಿ ಪಂಪ್ ಸೆಟ್‌ಗಳ ಸಂಖ್ಯೆ | 500 ಮೀಟರ್ ಹೊರಗಿರುವ ನೀರಾವರಿ ಪಂಪ್ ಸೆಟ್‌ಗಳ ಸಂಖ್ಯೆ | ಒಟ್ಟು |
|---|---|---|---|---|
| 1 | ಮೈಸೂರು | 2325 | 142 | 2467 |
| 2 | ಚಾಮರಾಜನಗರ | 1017 | 386 | 1403 |
| 3 | ಮಂಡ್ಯ | 6404 | 1818 | 8222 |
| 4 | ಹಾಸನ | 10982 | 591 | 11573 |
| | **ಒಟ್ಟು** | **20728** | **2937** | **23665** |

ನಿಗಮದ ಎಲ್ಲಾ ಸಕ್ಷಮ ಪ್ರಾಧಿಕಾರಿಗಳಿಗೆ ಅಂದಾಜು ಪಟ್ಟಿಯನ್ನು ಪುನರ್ ಪರಿಶೀಲಿಸಿ 500 ಮೀಟರ್ ಒಳಗಿರುವ/ ಹೊರಗಿರುವ ಪಂಪ್ ಸೆಟ್‌ಗಳ ಪರಿಷ್ಕೃತ ಅಂದಾಜು ಪಟ್ಟಿಯನ್ನು ಸಲ್ಲಿಸಲು ಸೂಚಿಸಲಾಗಿದೆ. ಪರಿಷ್ಕೃತ ಅಂದಾಜು ಪಟ್ಟಿ ಸಲ್ಲಿಕೆಯಾದ ನಂತರ ಕ್ರಮಕೈಗೊಳ್ಳಲಾಗುವುದು.

ಸಂಖ್ಯೆ: ಎನರ್ಜಿ 316 ಇಬಿಎಸ್ 2023

(ಕೆ.ಜೆ.ಜಾರ್ಜ್) 6/12/23
ಇಂಧನ ಸಚಿವರು